ನಾರಾಯಣ ಯಾಜಿ, ಶಿರಾಲಿ
ಮಾತು ಬೆಳ್ಳಿ. ಮೌನ ಬಂಗಾರ. ವಜ್ರ?



ಸುಲಭವಾಗಿ ಖಂಡಿಸಲಾಗದ ವಾದ.

ಎಸ್. ವೈದೇಹಿ ಶೇಖರ್, ಮೈಸೂರು
ಮಾತು ಬಲ್ಲವನಿಗೆ ಜಗಳವಿಲ್ಲ. ಊಟ ಬಲ್ಲವನಿಗೆ ರೋಗವಿಲ್ಲ. ಸಕಲಕಲಾವಲ್ಲಭನಿಗೆ?
ವಲ್ಲಭೆಯೊಡನೆ ಇರಲು ಸಮಯವಿಲ್ಲ.

ತಲಕಾಡು ಶ್ರೀನಿಧಿ, ಬೆಂಗಳೂರು
ಕೆಲವರು ಗಡಿಯಾರ ಸೆಟ್ ಮಾಡುವಾಗ ನಿಖರ ಸಮಯಕ್ಕೆ ಸೆಟ್ ಮಾಡುವುದಿಲ್ಲವಲ್ಲ, ಯಾಕೆ?
'ವಿಳಂಬಕಾಲ'ದ ಇವರಿಗೆ ನಿಖರ ಸಮಯ ಕಂಡರೆ ಮುಳ್ಳು ಚುಚ್ಚಿದಂತಾಗುವುದಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ದೆವ್ವಗಳು ಬಿಳಿ ಡ್ರೆಸ್ ಏಕೆ ಧರಿಸುತ್ತವೆ?
ಅಮಾವಾಸ್ಯೆಯ ರಾತ್ರಿಯಲ್ಲಿ ಓಡಾಡುವಾಗ ಅನ್ಯ ದೆವ್ವಗಳು ಕಾಣದೆ ಡಿಕ್ಕಿಯಾದೀತೆಂದು.

ಅಮರಯ್ಯಾ ಪತ್ರಿಮಠ, ಸುರಪುರ
'ಬೆವರಿನ ಬೆಲೆ' ಅರಿಯುವುದು ಹೇಗೆ?




ಸಮೀಪದ ಡಿಯೋಡರೆಂಟ್ ಮಾರಾಟಗಾರರನ್ನು ಸಂಪರ್ಕಿಸಿ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು
ಕುರುಕ್ಷೇತ್ರ ಯುದ್ಧವೇ ನಡೆಯದಿದ್ದರೆ....?
ದ್ರೌಪದಿ ಧರ್ಮಜನ ಮಾನ ಹರಾಜು ಹಾಕುತ್ತಿದ್ದಳು. ಕನಿಷ್ಠ 18ಲಕ್ಷ ಹೆಣ್ಣುಗಳ ವೈಧವ್ಯ ತಪ್ಪುತ್ತಿತ್ತು

ಅಂಚೆ ಸುಬ್ರಹ್ಮಣ್ಯ, ಬೆಂಗಳೂರು
ಸಾಯೋದ್ರಲ್ಲೊಮ್ಮೆ ಫಾರಿನ್ನೋಗ್ಬೇಕೆಂದಿದ್ದ ಅಪ್ಪನನ್ನು ಒಂದೇ ವಾರದಲ್ಲಿ ಮಗ ಕರೆದೊಯ್ದು ಬಂದನಲ್ಲ, ಏನಿದರ ಗುಟ್ಟು?
'ಬರ್ಬೇಕಾದ್ದೆಲ್ಲ ಬರಲೀ... ಕೊವಿಡ್ ವೈರಸ್ ದಯೆ ಇರಲಿ' ಎಂಬ ಹುನ್ನಾರ.

ರಮೇಶ್, ಹನುಮನಾಳು
ನನ್ನ ಸ್ನೇಹಿತನಿಗೆ ಮದುವೆಯಾಗಿ ಮಕ್ಕಳಿವೆ. ಆದರೆ ಅವನ ಭವಿಷ್ಯದಲ್ಲಿ ಪ್ರೀತಿಸುವವರು ಇದ್ದಾರೆ ಎಂದು ಬರೆದಿದೆಯಲ್ಲಾ.?
ಗುಡ್. ಸೊಸೆ, ಮೊಮ್ಮಕ್ಕಳ ಪ್ರೀತಿ ಈ ದಿನಗಳಲ್ಲಿ ವಿರಳ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ತಾವು ಕೊಟ್ಟ ಉತ್ತರಗಳನ್ನು ಅವಲೋಕಿಸಿದಾಗ ತಮ್ಮಲ್ಲಿ ಉಂಟಾಗುವ ಭಾವನೆ ಏನು ಸಾರ್?
'ಈ ಉತ್ತರ ಹೊಳೆದದ್ದಾದರೂ ಹೇಗೆ?' ಎಂಬ ಅಚ್ಚರಿ.

ಬಿ. ಚಂದ್ರೇಗೌಡ, ಬೆಂಗಳೂರು
ವಶಕ್ಕೂ, ಶವಕ್ಕೂ ಏನು ವ್ಯತ್ಯಾಸ?
ಒಂದೇ ಅಕ್ಷರ ವ್ಯತ್ಯಾಸ. ವಶ ನಿಯಮಬದ್ಧ; ಶವ ಯಮಬದ್ಧ.

ಶ್ರೀನಿವಾಸ ಪದಕಿ, ಮುಂಬಯಿ
ಹುಡುಗ ಹುಡುಗಿ ಸೇರಿ ಕೆಟ್ಟಾಗ ಹುಡುಗಿ ಕೆಟ್ಟಳು ಎಂದು ಮಾತ್ರ ಹೇಳುವರಲ್ಲಾ...?
ಸರಿಯೇ. ಹಾಲಿಗೆ ಹುಳಿ ಸೇರಿದಾಗ ಹಾಲಿನ ಹಾಲತ್ತೇ ಖರಾಬ್ ಆಗುವುದು.

ಪಿ. ಜಯವಂತ ಪೈ, ಕುಂದಾಪುರ
ಮಹಿಳೆಗೂ, ಕಹಳೆಗೂ ವ್ಯತ್ಯಾಸವೇನು?
ಕಹಳೆ ಊದಿದರೆ ಚೆನ್ನ. ಮಹಿಳೆ ಊದದಿದ್ದರೆ ಚೆನ್ನ.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಲಾಯರ್‌ಗೆ ಕಪ್ಪು ಕೋಟು. ಡಾಕ್ಟರ್‌ಗೆ ಬಿಳಿ ಕೋಟು. ರಾಜಕಾರಣಿಗೆ?
ಕೋಟ್‌ಗಳಿಗೆ ಕೋಟ್ ಬೇಕಾಗದು. ರಾಜಕಾರಣಿ 'ಟರ್ನ್‌ಕೋಟ್'. (ಬಣ್ಣ ಬದಲಾಯಿಸುವವನು).

ಪಿ.ಎನ್. ಶ್ರೀವತ್ಸ, ಬೆಂಗಳೂರು
ಮಗುವಿಗೆ ಹೆಸರಿಡಬೇಕಾದರೆ ಸಾಮಾನ್ಯವಾಗಿ ತಾಯಿಯದೇ ಕೈ ಮೇಲಾಗಿರಲು ಕಾರಣವೇನು?
ಜಗದ ಯಾವುದೇ ಉತ್ಪಾದನೆಗೆ ಹೆಸರಿಡುವ ಹಕ್ಕು ಉತ್ಪಾದಕರಿಗೇ ಇರುವುದರಿಂದ.

## ಬಹುಮಾನಿತ ಪ್ರಶ್ನೆ

ದಿನೇಶ್, ಗುಡ್ಡದೂರು
ಇತ್ತೀಚಿನ ದಿನಗಳಲ್ಲಿ ಟಿ.ವಿ. ಮಾಧ್ಯಮಗಳಲ್ಲಿ ಬರುವ ಜ್ಯೋತಿಷಿಗಳು ಸಿಕ್ಕಾಪಟ್ಟೆ ಗಡ್ಡ ಬಿಡುತ್ತಿರಲು ಕಾರಣವೇನು?
ಬೊಗಳೆಯ ಮೂಲಕ ಇತರರನ್ನು ಬೋಳಿಸುವ ಭರದಲ್ಲಿ ಸ್ವಂತ ಬೋಳಿಸಿಕೊಳ್ಳಲು ಸಮಯವಿಲ್ಲವಂತೆ.

ಜಿ. ಪ್ರದೀಪಕುಮಾರ್, ಹೂವಿನಹಡಗಲಿ
ಅಂದು ಟೆಂಟ್‌ಗಳಲ್ಲಿ ಸಿನಿಮಾ ನೋಡುತ್ತಿದ್ದುದಕ್ಕೂ, ಇಂದು ಮಾಲ್‌ಗಳಲ್ಲಿ ನೋಡುವುದಕ್ಕೂ ಏನು ವ್ಯತ್ಯಾಸ?
ಅಂದು ವಾತಾವರಣ ಕಳಪೆ, ಸಿನಿಮಾದ ಗುಣಮಟ್ಟ ಸೂಪರ್. ಇಂದು ಅದಲುಬದಲು.

ಬೂಕನಕೆರೆ ವಿಜೇಂದ್ರ, ಮೈಸೂರು
ವಯಸ್ಸಾದ ಹೆಂಗಸರೇ ಹೆಚ್ಚು ಮೇಕಪ್ ಮಾಡಿಕೊಳ್ಳುತ್ತಿದ್ದಾರಲ್ಲಾ.....?
ಭೇಷ್. ವಯಸ್ಸಾಯಿತೆಂದು ಹ್ಯಾಪ್‌ಮೋರೆ ಇಟ್ಟುಕೊಳ್ಳುವುದಕ್ಕಿಂತ ಹೀಗೆ ಹ್ಯಾಪಿ ಮೋರೆ ಇಟ್ಟುಕೊಳ್ಳುವುದು ಒಳಿತು.

ಯನ್. ರವೀಂದ್ರನಾಥ ರೈ, ಕುಂಜಿಬೆಟ್ಟು
ಮಧ್ಯರಾತ್ರಿಯಲ್ಲಿ ಸ್ಕೂಟರ್ ಅರ್ಧದಾರಿಯಲ್ಲಿ ಪಂಕ್ಚರ್ ಆದರೆ ಫೋನಿಸಬೇಕಾದ್ದು ಮನೆಗೋ, ಪೊಲೀಸ್ ಠಾಣೆಗೋ?



ಎರಡೂ ಬೇಡ. ನೋ ಪಾರ್ಕಿಂಗಲ್ಲಿ ನಿಲ್ಲಿಸಿ; ಬೆಳಗ್ಗೆ ಮೆಕ್ಯಾನಿಕ್ ಜೊತೆ ಸ್ಟೇಷನ್‌ಗೆ ಹೋಗಿ.

ಯಶೋದಾ ಎಸ್. ಶೆಟ್ಟಿ, ಅಜೆಕಾರ್
ಚಂಡೆಮದ್ದಳೆ, ಹಾರ್ಮೋನಿಯಂ ವಾದಕರು ಮತ್ತು ಗಾಯಕರು ತಲೆಕೂದಲನ್ನು ಉದ್ದವಾಗಿ ಬೆಳೆಸುವುದೇಕೆ?
ತಾಳ ಕೂದಲೆಳೆಯಷ್ಟೂ ತಪ್ಪಬಾರದು, ಆಲಾಪ ಕೇಶದಷ್ಟಾದರೂ ದೀರ್ಘವಿರಬೇಕೆಂದು ಸದಾ ನೆನೆಸಿಕೊಳ್ಳುತ್ತಿರಲು.

■ ರಾಮ್